ನಂ. ಆರ್‌ಡಿ ೯ ಡಬ್ಲ್ಯೂಜಿಎ ೮೭ ದಿನಾಂಕ ೧೪-೩-೧೯೮೮

೩	೧೯೮೭-೮೮	೧	ಪೀರ್ ಮೌಲಲಿ ಮಸೀದಿ, ರಾಮಾಪುರ, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
		೨	ಪೀರ್ ಮಹಬೂಬ್, ಸುಭಾನಿ ಮಸೀದಿ ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೩	ಪೀರ್ ಹೈದರ್ ಮಸೀದಿ ರಾಮಾಪುರ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೪	ಇದ್ಗಾ, ಉರಗೋಳ ಹಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾಂ	೧೦,೦೦೦-೦೦
		೫	ಬಾಡಲಿ ಮಸೀದಿ, ಉಗ್ರಗೋಳ ಹಳ್ಳಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦
		೬	ಮಸೀದಿ, ಇಂಗಲಗಿ, ಸವದತ್ತಿ ತಾಲ್ಲೂಕು ಬೆಳಗಾಂ	೧೦,೦೦೦-೦೦
		೭	ಮಸೀದಿ, ಮಟಿಕೋಲಿ, ಸವದತ್ತಿ ತಾಲ್ಲೂಕು, ಬೆಳಗಾಂ	೫,೦೦೦-೦೦

ತಾಲ್ಲೂಕು ಪಂಚಾಯಿತಿಗಳಿಗೆ ಕಾಮಗಾರಿಗಳನ್ನು ಕೈಗೊಳ್ಳಲು ಅಧಿಕಾರ ವಹಿಸಿಕೊಡುವುದು

೨೨೨೧. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು) — ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಕ್ಷ್ ಮಂತರ್ಯ ಪಶಂಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕು ಅಭಿವೃದ್ಧಿ ಕಾಮಗಾರಿಗಳು ನೇರವಾಗಿ ಜಿಲ್ಲಾ ಪರಿಷತ್ತಿನ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಕಾಮಗಾರಿಗಳು ವಿಳಂಬವಾಗುತ್ತಿದ್ದು ಸದರಿ ಕಾಮಗಾರಿಗಳು ಚುರುಕುಗೊಳಿಸುವುದಕ್ಕಾಗಿ ಇದರ ಅಧಿಕಾರ ವ್ಯಾಪ್ತಿಯನ್ನು ತಾಲ್ಲೂಕು ಪಂಚಾಯಿತಿಗೆ ವಹಿಸುವುದು ಸೂಕ್ತವಲ್ಲವೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ನಿಲುವೇನು ? ವಿವರ ನೀಡುವುದು

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ. ಆದರೂ, ಕಲಂ ೧೩೬ (೧) (ಬಿ) ಪ್ರಕಾರ ಜಿಲ್ಲಾ ಪರಿಷತ್ತಿನವರೇ ಇದನ್ನು ನಿರ್ಧರಿಸಬಹುದು.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಪುರಸಭೆ ಹಾಗೂ ನಗರಸಭೆಗಳಿಗೆ ಬಹುಮಾನ ಯೋಜನೆ

೧೮೭೬. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪುರಸಭೆ ಹಾಗೂ ನಗರಸಭೆಗಳ ಕಾರ್ಯ ದಕ್ಷತೆ ಹೆಚ್ಚಿಸಲು ಹಾಗೂ ಪ್ರಗತಿಯನ್ನು ಮೆಚ್ಚಿ, ಬಹುಮಾನ ಯೋಜನೆ ಜಾರಿಗೆ ತಂದಿರುವುದು ಉಪಯೋಗವಾಗಿದೆಯೇ ?

ಆ) ಸಂಬಂಧಪಟ್ಟ ಪುರಸಭೆ/ನಗರಸಭೆಗಳು ಈ ಬಹುಮಾನ ಪಡೆಯುವಂತೆ ಆಕರ್ಷಿಸಲು ಅವರು ಯಾವ ಯಾವ ಬಾಬಿನಲ್ಲಿ ಪ್ರಗತಿ ಹೊಂದಿರಬೇಕೆಂಬ ನಿರ್ದಿಷ್ಟವಾದ ವಿವರವನ್ನೊಳಗೊಂಡ ಪರಿಪತ್ರ ಸರ್ಕಾರದಿಂದ ಹೊರಡಿಸಲಾಗಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಉಪಯುಕ್ತವಾಗಿದೆ

ಆ) ಹೌದು. ಪೌರಾಡಳಿತ ನಿರ್ದೇಶಕರು ಪರಿಪತ್ರ ಹೊರಡಿಸಿದ್ದಾರೆ, ಪ್ರತಿ ಲಗತ್ತಿಸಿದೆ

ಇ,

೧. ಎಲ್ಲಾ ನಗರಪಾಲಿಕೆ ಆಯುಕ್ತರಿಗೆ

೨. ಎಲ್ಲಾ ನಗರಸಭೆ ಆಯುಕ್ತರಿಗೆ

ಮಾನ್ಯರೇ,

೧೯೮೫–೮೬ರಲ್ಲಿ ಉತ್ತಮ ನಗರಪಾಲಿಕೆ ಮಂತ್ತು ನಗರ ಸಭೆಗೆ ಬಹುಮಾನ ನೀಡುವ ಯೋಜನೆ

ಸಾರ್ವಜನಿಕರಿಗೆ ಉತ್ತಮ ಪೌರ ಸೌಲಭ್ಯಗಳನ್ನು ನೀಡುತ್ತಿರುವ ನಗರ ಪಾಲಿಕೆ ಮಂತು ನಗರ ಸಭೆಗಳು ಇನ್ನೂ ಹೆಚ್ಚಿನ ಪೌರ ಸೌಲಭ್ಯಗಳನ್ನು ನೀಡುವಂತೆ ಪ್ರೋತ್ಸಾಹಿಸುವ ಸಲುವಾಗಿ ರಾಜ್ಯ ಸರ್ಕಾರವು ಬಹುಮಾನ ಯೋಜನೆಯನ್ನು ಸರ್ಕಾರಿ ಆದೇಶ. ಕ್ರಮಾಂಕ ಹೆಚ್.ಯು.ಡಿ. ೪೧ ಜಿಇಎಲ್ ೮೩, ದಿನಾಂಕ ೨೫–೬–೧೯೮೪ರ ಮೂಲಕ ಜಾರಿಗೊಳಿಸಿರುವುದು ಒಂದು ಉತ್ತಮ ಸಂಪ್ರದಾಯವಾಗಿದೆ. ಈ ಯೋಜನೆ ಅಡಿಯಲ್ಲಿ ೧೯೮೫–೮೬ನೇ ಸಾಲಿಗೆ ಉತ್ತಮ ನಗರ ಪಾಲಿಕೆ ಮಂತ್ತು ನಗರಸಭೆ ಆರಿಸಲು ರಾಜ್ಯಮಟ್ಟದಲ್ಲಿ ನಗರಾಭಿವೃದ್ಧಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿರ್ಮಿಸಿದೆ. ಈ ಸಮಿತಿಗೆ ಇದರೊಂದಿಗೆ ಲಗತ್ತಿಸಿರುವ ೧೮ ಮಿಂಡಿಕೆಗಳ ತಃಖ್ತೆಯನ್ನು ಸಂಪೂರ್ಣ ಮಾಹಿತಿ (ಪುರಸಭೆಯ ಕಾರ್ಯ ವೈಖರಿ ಬಗ್ಗೆ) ಯೊಂದಿಗೆ ಕಳುಹಿಸಿ ನಿಮ್ಮ ನಗರ ಪಾಲಿಕೆ/ನಗರಸಬೆ ೧೯೮೫–೮೬ರ ಬಹುಮಾನ ಯೋಜನೆಯಲ್ಲಿ ಪಾಲುಗೊಳ್ಳಬೇಕೆಂದು ಕೋರುತ್ತೇನೆ.

ಆದ್ದರಿಂದ ದಿನಾಂಕ ೧–೪–೧೯೮೫ ರಿಂದ ೩೧–೫–೧೯೮೬ರ ವರೆವಿಗೆ ಲಗತ್ತಿಸಿರುವ ತಃಖ್ತೆಯಲ್ಲಿ ಪೂರ್ಣ ಮಾಹಿತಿಯನ್ನು ಜಾಗರೂಕತೆಯಿಂದ ತುಂಬಿಸಿ ೩೦–೪–೧೯೮೬ಕ್ಕೆ ಮೊದಲಂತೆ ಈ ಕಛೇರಿಗೆ ೧೯೮೫–೮೬ರ ಅನುಮೋದಿಸಿದ ಆಯವ್ಯಯದೊಂದಿಗೆ ಕಳುಹಿಸಿ ಕೊಡಲು ಕೋರಲಾಗಿದೆ.

ದಯವಿಟ್ಟು ಸ್ವೀಕೃತಿ ಪತ್ರವನ್ನು ಕಳುಹಿಸಿಕೊಡಿ.

ನಿಮ್ಮ ನಂಬುಗೆಯ

ಸಹಿ

ಪೌರಾಡಳಿತ ನಿರ್ದೇಶಕರ ಮತ್ತು ಬಹುಮಾನ ಸಮಿತಿಯ ಕಾರ್ಯದರ್ಶಿಯವರ ಪರವಾಗಿ

ನಿರ್ದೇಶಕರ ಒಪ್ಪಿಗೆ ಮೇರೆ

೧೯೮೮-೮೯ (೧-೪-೧೯೮೮ ರಿಂದ ೩೧-೩-೧೯೮೯) ಉತ್ತಮ ನಗರ ಪಾಲಿಕೆ
ನಗರಸಭೆ ಬಹುಮಾನ ಯೋಜನೆ ಬಗ್ಗೆ ಮಾಹಿತಿ

೧. ನಗರಪಾಲಿಕೆ : ನಗರಸಭೆ ಸ್ಥಾಯಿ ಸಮಿತಿ ಸಭೆ ನಡವಳಿಕೆಯನ್ನು ಸರಿಯಾಗಿ ನಡೆಸುವ ಬಗ್ಗೆ

ಅ) ನಗರಪಾಲಿಕೆ/ನಗರಸಭೆ

ಕ್ರ. ಸಂ.	ಮಾಹೆ	ಅಧಿವೇಶನದ ದಿನಾಂಕ	ಕಾರ್ಯ ಸೂಚಿಯಲ್ಲಿರುವ ವಿಷಯಗಳ ಸಂಖ್ಯೆ	ತೀರ್ಮಾನ ತೆಗೆದುಕೊಂಡ ವಿಷಯಗಳ ಸಂಖ್ಯೆ
೧	ಏಪ್ರಿಲ್ ೧೯೮೮			
೨	ಮೇ ೧೯೮೮			
೩	ಜೂನ್ ೧೯೮೮			
೪	ಜುಲೈ ೧೯೮೮			
೫	ಆಗಸ್ಟ್ ೧೯೮೮			
೬	ಸೆಪ್ಟೆಂಬರ್ ೧೯೮೮			
೭	ಅಕ್ಟೋಬರ್ ೧೯೮೮			
೮	ನವೆಂಬರ್ ೧೯೮೮			
೯	ಡಿಸೆಂಬರ್ ೧೯೮೮			
೧೦	ಜನವರಿ ೧೯೮೯			
೧೧	ಫೆಬ್ರುವರಿ ೧೯೮೯			
೧೨	ಮಾರ್ಚ್ ೧೯೮೯			

ಆ) ಸ್ಥಾಯಿ ಸಮಿತಿ ನಡೆವಳಿಕೆ

ಕ್ರ. ಸಂ.	ಮಾಹೆ	ಅಧಿವೇಶನದ ದಿನಾಂಕ	ಕಾರ್ಯ ಸೂಚಿಯಲ್ಲಿರುವ ವಿಷಯಗಳ ಸಂಖ್ಯೆ	ತೀರ್ಮಾನ ತೆಗೆದುಕೊಂಡ ವಿಷಯಗಳ ಸಂಖ್ಯೆ
೧	ಏಪ್ರಿಲ್ ೧೯೮೮			
೨	ಮೇ ೧೯೮೮			
೩	ಜೂನ್ ೧೯೮೮			
೪	ಜುಲೈ ೧೯೮೮			
೫	ಆಗಸ್ಟ್ ೧೯೮೮			
೬	ಸೆಪ್ಟೆಂಬರ್ ೧೯೮೮			
೭	ಅಕ್ಟೋಬರ್ ೧೯೮೮			
೮	ನವೆಂಬರ್ ೧೯೮೮			
೯	ಡಿಸೆಂಬರ್ ೧೯೮೮			
೧೦	ಜನವರಿ ೧೯೮೯			
೧೧	ಫೆಬ್ರುವರಿ ೧೯೮೯			
೧೨	ಮಾರ್ಚ್ ೧೯೮೯			

೨. ತೆರಿಗೆ ವಸೂಲಿ

(ಆಕ್ಟ್ರಯ್ ಪರಿಹಾರ ತುಟ್ಟಿಭತ್ಯೆಯ ಅನುದಾನ, ಅಭಿವೃದ್ಧಿ ಅನುದಾನ ಇವುಗಳನ್ನು ಚೇಡಿಕೆ ವಸೂಲಿಯಲ್ಲಿ ಸೇರಿಸತಕ್ಕದ್ದಲ್ಲ)

ಅ) ೧-೪-೧೯೮೫ರಲ್ಲಿ ನಿಂತ ಬಾಕಿ

ಆ) ೧೯೮೫-೮೬ರ ಒಟ್ಟು ಬೇಡಿಕೆ

ಇ) ಜಮ್ಮಾ

ಈ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗಿನ ವಸೂಲಿ

ಉ) ೧-೪-೧೯೮೬ರಲ್ಲಿ ನಿಂತ ಬಾಕಿ

ಊ) ಶೇಕಡ ವಸೂಲಿ

೩. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಶೇಕಡ ೧೮ರಲ್ಲಿ ಉಪಯೋಗಿಸಿದ ಮೊತ

ಅ) ೧-೪-೧೯೮೫ಕ್ಕೆ ಖರ್ಚಾಗದೇ ಉಳಿದಿದ್ದ ಬಾಕಿ

ಆ) ೧೯೮೫-೮೬ಕ್ಕೆ ನಿಗಧಿಪಡಿಸಿದ ಮೊತ್ತ

ಇ) ಜಂಮ್ಮಾ

ಈ) ೧-೪-೧೯೮೫ ರಿಂದ ೩೧-೩-೧೯೮೬ರ ವರೆಗಿನ ಆಗಿರುವ ಖರ್ಚು

ಉ) ೧-೪-೧೯೮೬ರಲ್ಲಿ ಖರ್ಚಾಗದೇ ಉಳಿದ ಹಣ

ಊ) ಶೇಕಡ ಖರ್ಚು

೪. ರಸ್ತೆ ನಿರ್ವಹಣೆ

ಅ) ತರಹೆವಾರಿ ನಿರ್ಮಿಸಿರುವ ರಸ್ತೆಗಳ ಉದ್ದದ ವಿವರ (ಕಿ.ಮೀ.ಗಳಲ್ಲಿ)

ಆ) ರಸ್ತೆ ನಿರ್ವಹಣೆ

೧. ೧೯೮೫-೮೬ರಲ್ಲಿ ಮುಂಗಡ ಪತ್ರದಲ್ಲಿ ನಿಗಧಿಪಡಿಸಿದ ನಿರ್ವಹಣಾ ಹಣ

೨. ಖರ್ಚಾದ ಮೊತ್ತ

೩. ಎಷ್ಟು ಉದ್ದದ ರಸ್ತೆ ನಿರ್ವಹಿಸಿದೆ

ಇ) ಹೊಸ ರಸ್ತೆಗಳ ನಿರ್ಮಾಣ

೧. ೧೯೮೫-೮೬ರಲ್ಲಿ ಮುಂಗಡ ಪತ್ರದಲ್ಲಿ ನಿಗದಿಪಡಿಸಿದ ಹಣ

೨. ಖರ್ಚಾದ ಹಣ

೩. ಎಷ್ಟು ಉದ್ದ ರಸ್ತೆ ನಿರ್ವಹಿಸಿದೆ

೫. ಬೀದಿ ದೀಪಗಳ ನಿರ್ವಹಣೆ

ಅ) ಒಟ್ಟು ಎಷ್ಟು ಉದ್ದದ ರಸ್ತೆ ನಿರ್ವಹಣೆಯಲ್ಲಿದೆ

ಆ) ಹಾಲಿ ಒಟ್ಟು ಇರುವ ಬೀದಿ ದೀಪಗಳ ಸಂಖ್ಯೆ

ಇ) ಸರಾಸರಿ ಪ್ರತಿ ಕಿ. ಮೀ.ಗೆ ಹಾಕಿರುವ ದೀಪಗಳ ಸಂಖ್ಯೆ

ಈ) ಬೀದಿ ದೀಪಗಳ ನಿರ್ವಹಣೆಗೆ ಖರ್ಚಾದ್ದಹಣ

ಉ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ

ಊ) ೧-೪-೧೯೮೬ಕ್ಕೆ ಇನ್ನೂ ಕೊಡಬೇಕಾದ ಹಣ

೬. ನೀರು ಸರಬರಾಜಿನ ಸಂಪನ್ಮೂಲ ಮತ್ತು ನಿರ್ವಹಣೆ

ಅ) ನೀರು ಸರಬರಾಜಿನ ಮೂಲ

ಆ) ನೀರು ಸರಬರಾಜನ್ನು ನಗರಪಾಲಿಕೆ/ನಗರಸಭೆ ನಿರ್ವಹಿಸುತ್ತಿದೆಯೇ ಅಥವಾ ಜಲ ಮಂಡಲಿ ನಿರ್ವಹಿಸುತ್ತದೆಯೆ ?

ಇ) ಪ್ರತಿದಿನ ಪ್ರತಿವ್ಯಕ್ತಿಗೆ ಸರಬರಾಜು ಆಗಬೇಕಿರುವ ಸರಾಸರಿ ನೀರಿನ ಪ್ರಮಾಣ.

ಈ) ಹಾಲಿ ಸರಬರಾಜು ಮಾಡುತ್ತಿರುವ ನೀರಿನ ಪ್ರಮಾಣ ಸಾಕಾಗುತ್ತಿದೆಯೇ

ಉ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ನೀರು ಸರಬರಾಜು ನಿರ್ವಹಣೆ ಬಗ್ಗೆ ಖರ್ಚು ಮಾಡಿದ ಹಣ

ಊ) ನೀರು ಸರಬರಾಜಿಗಾಗಿ ಕೊಟ್ಟಿರುವ ಹಣ

೧. ಜಲ ಮಂಡಳಿಗೆ

೨. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ (೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ನೀರು ಸರಬರಾಜಿಗೆ ಕೊಟ್ಟಿರುವ ಹಣ)

ಋ) ದಿನಾಂಕ ೧-೪-೧೯೮೬ಕ್ಕೆ ಬಾಕಿ ಇರುವ ಹಣ

೧. ಜಲ ಮಂಡಳಿಗೆ

೨. ಕರ್ನಾಟಕ ವಿದ್ಯುಚ್ಛಕ್ತಿ ಮಂಡಿಳಿಗೆ

೭. ಚರಂಡಿ ಮತ್ತು ಒಳಚರಂಡಿಗಳ ನಿರ್ವಹಣೆ ಮತ್ತು ಹೊಸ ಚರಂಡಿಗಳ ನಿರ್ಮಾಣ

ಅ) ನಿರ್ವಹಣೆ

೧. ೧೯೮೫-೮೬ರ ಮುಂಗಡ ಪತ್ರದಲ್ಲಿ ನಿಗಧಿಪಡಿಸಿದ ಹಣ

೨. ವೆಚ್ಚ ಮಾಡಿದ ಹಣ

ಆ) ಹೊಸ ಚರಂಡಿಗಳ ನಿರ್ಮಾಣ

೧. ೧೯೮೫-೮೬ ರ ಮುಂಗಡ ಪತ್ರದಲ್ಲಿ ನಿಗದಿಪಡಿಸಿದ ಹಣ.

೨. ವೆಚ್ಚ ಮಾಡಿದ ಹಣ

೮. ಉದ್ಯಾನವನ ಮತ್ತು ಆಟದ ಮೈದಾನಗಳ ನಿರ್ಮಾಣ, ಅಭಿವೃದ್ಧಿ ಮತ್ತು ನಿರ್ವಹಣೆ

ಕ್ರ. ಸಂ.	ವಿಷಯ	ಆಟದ ಮೈದಾನದ ಸಂಖ್ಯೆ	ಉದ್ಯಾನವನಗಳ ಸಂಖ್ಯೆ	ವೆಚ್ಚ ಮಾಡಿದ ಹಣ
೧.	ನಿರ್ಮಾಣ			
೨.	ಅಭಿವೃದ್ಧಿ			
೩.	ನಿರ್ವಹಣೆ			
೪.	ಜಮ್ಮಾ			

೯. ಸಾಲು ಮರಗಳನ್ನು ನೆಡುವುದು ಮತ್ತು ಸಂರಕ್ಷಣೆ ಬಗ್ಗೆ ವಿವರ

ಅ) ೧-೪-೧೯೮೫ರಲ್ಲಿ ಇರುವ ಮರಗಳ ಸಂಖ್ಯೆ

ಆ) ಸಾಲು ಮರಗಳ ಸಂರಕ್ಷಣೆಗಾಗಿ ಖರ್ಚಾದ ವೆಚ್ಚ

ಇ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ನೆಟ್ಟ ಸಾಲುಮರಗಳು

ಈ) ಸಾಲು ಮರಗಳನ್ನು ನೆಡುವುದು ಮತ್ತು ಸಂರಕ್ಷಣೆಗೆ ಖರ್ಚಾದ ವೆಚ್ಚ

ಉ) ದಿನಾಂಕ ೧-೪-೧೯೮೬ರಲ್ಲಿ ಒಟ್ಟು ಮರಗಳ ಮತ್ತು ಸಸಿಗಳ ಸಂಖ್ಯೆ

೧೦. ನಗರವನ್ನು ಶುಚಿತ್ವವಾಗಿಡುವುದು

ಅ) ನಗರ ವಿಸ್ತೀರ್ಣ ಕಿ.ಮೀ. ಗಳಲ್ಲಿ

ಆ) ೧೯೮೧ ಪ್ರಕಾರ ಜನಸಂಖ್ಯೆ

ಇ) ೧೯೮೫-೮೬ರ ಮುಂಗಡ ಪತ್ರದಲ್ಲಿ ಸಾಮಾನ್ಯ ಸ್ವಚ್ಛತೆಗೆ ನಿಗಧಿ ಪಡಿಸಿದ ಹಣ

ಈ) ಬಾಬುವಾರು, ಖರ್ಚು ಮಾಡಿದ ವಿವರ

೧೧. ಸರ್ಕಾರಕ್ಕೆ ಪಾವತಿ ಮಾಡಬೇಕಾದ ಉಪಕರಗಳು

ಅ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಸರ್ಕಾರಕ್ಕೆ ಪಾವತಿ ಮಾಡಿದ ಹಣ

ಆ) ೧-೪-೧೯೮೬ಕ್ಕೆ ಪಾವತಿ ಮಾಡಬೇಕಾದ ಹಣ (ಪ್ರತಿ ಉಪಕರಣಗಳ ವಿವರಣೆ ನೀಡುವುದು)

೧೨. ಸರ್ಕಾರಕ್ಕೆ ಜೀವ ವಿಮಾ ಸಂಸ್ಥೆ ಮತ್ತು ಇತರೆ ಹಣಕಾಸು ಸಂಸ್ಥೆಗಳು ನೀಡಿರುವ ಸಾಲದ ಬಾಬ್ತು ಮರು ಪಾವತಿ ವಿವರ

ಅ) ದಿನಾಂಕ ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಸಾಲ ಮರು ಪಾವತಿ ಮಾಡಿದ ಹಣ

೧) ಅಸಲು

೨) ಬಡ್ಡಿ

೩) ಜುಮ್ಲಾ

ಆ) ೧-೪-೧೯೮೬ಕ್ಕೆ ಸುಸ್ತಿ ಕಂತುಗಳ ಬಾಕಿ

೧) ಅಸಲು

೨) ಬಡ್ಡಿ

೩) ಜುಮ್ಲಾ

೧೩. ಕರ್ನಾಟಕ ವಿದ್ಯುತ್‌ಚ್ಛಕ್ತಿ ಮಂಡಳಿಗೆ ತೀರ್ವಳಿ ಮಾಡಬೇಕಾದ ಬಾಕಿ

ಅ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಪಾವತಿ ಮಾಡಿರುವ ಹಣ

ಆ) ೧-೪-೧೯೮೬ಕ್ಕೆ ಉಳಿಕೆ ಪಾವತಿ ಮಾಡಬೇಕಾದ ಹಣ

೧೪. ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ಮತ್ತು ಒಳಚರಂಡಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ತೀರ್ವಳಿ ಮಾಡಬೇಕಾದ ಬಾಕಿ

ಅ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೬ಕ್ಕೆ ಉಳಿಕೆ ಕೊಡಬೇಕಾದ ಬಾಕಿ

೧೫. ಸರ್ಕಾರಕ್ಕೆ ನಿವೃತ್ತಿ ವೇತನದ ಬಾಬ್ತು ಮಂತಿಗೆ ಬಾಕಿ

ಅ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಸರ್ಕಾರಕ್ಕೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೫ಕ್ಕೆ ಪಾವತಿ ಮಾಡಬೇಕಾದ ಬಾಕಿ

೧೬. ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುವ ತನಿಖಾ ವೆಚ್ಚ

ಅ) ೧-೪-೧೯೮೫ ರಿಂದ ೩೧-೩-೧೯೮೬ರ ವರೆಗೆ ಸರ್ಕಾರಕ್ಕೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೬ಕ್ಕೆ ಬಾಕಿ ನಿಂತಿರುವ ಪಾವತಿ ಮಾಡಬೇಕಾದ ಮೊಬಲಗು

೧೭. ಕುಟುಂಬ ಕಲ್ಯಾಣ ನಿಧಿಗೆ ಪಾವತಿ ಮಾಡಬೇಕಾದ ಬಾಕಿ

ಅ) ದಿನಾಂಕ ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೬ಕ್ಕೆ ಪಾವತಿ ಮಾಡಬೇಕಾಗಿರುವ ಬಾಕಿ

೧೮. ಸರ್ಕಾರಕ್ಕೆ ಪಾವತಿ ಮಾಡಬೇಕಾದ ವೈದ್ಯಕೀಯ ಮಂತಿಗೆ

ಅ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೬ಕ್ಕೆ ಪಾವತಿ ಮಾಡಬೇಕಾಗಿರುವ ಬಾಕಿ

ಧೃಡೀಕರಣ

ಮೇಲೆ ನಮೂದಿಸಿರುವ ಎಲ್ಲಾ ಅಂಶಗಳೂ ಸರಿಯಾಗಿರುತ್ತವೆ ಎಂದು ನಾನು ಧೃಢೀಕರಿಸುತ್ತೇನೆ

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಂನ್ನು ಮಂಂಡಿಸುವುದಂ.

ಶ್ರೀ ಎ. ಲಕ್ಷ್ಮೀಸಾಗರ್,—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಂನ್ನು ಸಭೆಯಂ ಮುಂಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯು ಮಂಂದಿಡಲಾಗಿದೆ.

ಮಂಗಳೂರು ಮಹಾ ನಗರದ ನೀರು ಸರಬರಾಜಿನ ಬಗ್ಗೆ.

೧೮೨೩. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ನಗರದಲ್ಲಿ ಪ್ರಸ್ತುತ ಜನರಿಗೆ ಒದಗಿಸುತ್ತಿರುವ ಕುಡಿಯುವ ನೀರಿನ ಪ್ರಮಾಣವೆಷ್ಟು (ಒಟ್ಟು ಜನಸಂಖ್ಯೆ ಹಾಗೂ ನೀರಿನ ಪ್ರಮಾಣದ ಪ್ರತ್ಯೇಕ ವಿವರಗಳನ್ನು ನೀಡುವುದು ?

ಆ) ಈ ಕುಡಿಯುಂದ ನೀರಿನ ತೊಂದರೆ ಕಡಿಮೆ ಮಾಡಲು ಸರ್ಕಾರದವರು ಉದ್ದೇಶಿಸಿರುವ ಶಾಶ್ವತ ಪರಿಹಾರದ ಕಾರ್ಯ ಕ್ರಮವೇನು, ಹಾಗೂ ಇದಕ್ಕೆ ಬೇಕಾದ ಹಣದ ಪ್ರಮಾಣವೆಷ್ಟು ?

ಇ) ಈ ದಿಸೆಯಲ್ಲಿ ಈವರೆಗೆ ಸಾಧಿಸಿದ ಪ್ರಗತಿಯೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಜನಸಂಖ್ಯೆ ೩.೫೦ ಲಕ್ಷ ತಲಾ ದಿನಂಪ್ರತಿ ೨೪ ಗ್ಯಾಲನ್‌ಗಳು (೧೦೫ ಲೀಟರ್‌ಗಳು)